

ಪ್ರೀತಿಯ ಬಂಧನದಲ್ಲಿ ಅರಳಬೇಕಾದ ದಾಂಪತ್ಯ ಕೋಳಗಳಲ್ಲಿ ಸಿಲುಕಿ ಉಸಿರುಗಟ್ಟುವ ನಿದರ್ಶನಗಳು ಹೆಚ್ಚುತ್ತಲೇ ಇವೆ...

ಮಿಳಿತವಾಗಿರುತ್ತವೆ. ಅತಿ ಸರಳವಾಗಿ ಬದುಕುವ ಸಜ್ಜನರನ್ನು ನಾನು ಕಂಡಿರುವೆ.

ನನ್ನ ವಿದ್ಯಾರ್ಥಿನಿಯೊಬ್ಬಳು ಮುಸ್ಲಿಂ. ಆಕೆಯ ಪತಿ ಎಆರ್‌ಟಿಒ ಆಗಿದ್ದರು. ಮನೆಗೆ ಹಡಬೆ ದುಡ್ಡು ಬರುತ್ತಿತ್ತು. ದಿನಕ್ಕೆ ಐದು ಬಾರಿ ಪ್ರಾರ್ಥನೆ ಮಾಡುವ ತನಗೆ ಆ ದುಡ್ಡನ್ನು ಜೀರ್ಣಿಸಿಕೊಳ್ಳುವುದು ಸಾಧ್ಯವಿಲ್ಲ ಎಂದು ಆಕೆ ಬೇರೆ ಇಲಾಖೆಗೆ ವರ್ಗಾವಣೆ ತೆಗೆದುಕೊಳ್ಳುವಂತೆ ಗಂಡನನ್ನು ಪ್ರೇರೇಪಿಸಿದ್ದನ್ನೂ ನೋಡಿರುವೆ.

ನನ್ನ ಪತ್ನಿಯು ಪುಟ್ಟ ಮಗಳಿಗೆ ಸಾಮ್ರಾಣಿ ಹೊಗೆ ಹಾಕಲು ಇದ್ದಿಲು ತರುವಂತೆ ಸೂಚಿಸಿದಳು. ಹಿಂದೆ ಹಳ್ಳಿಯಲ್ಲಿದ್ದ ನಮಗೆ ಇದ್ದಿಲು ಸಲೀಸಾಗಿ ಸಿಗುತ್ತಿತ್ತು. ಬೆಂಗಳೂರಿಗೆ ಬಂದಮೇಲೆ ಅದು ಎಲ್ಲಿ ಸಿಗುತ್ತದೆ ಎಂದು ಪತ್ತೆ ಮಾಡಿದೆ. ಸ್ವಾಗತ್ ಚಿತ್ರಮಂದಿರದ ಬಳಿ ದೊರೆಯುತ್ತದೆ ಎಂದು ತಿಳಿಯಿತು. ಅಲ್ಲಿಗೆ ಹೋದೆ. ಎರಡು ಕೆ.ಜಿ. ಇದ್ದಿಲು ಕೊಡಿ ಎಂದು ಕೇಳಿದೆ. ಅವರು ಉರ್ದು ಶೈಲಿಯ ಕನ್ನಡದಲ್ಲಿ ಮಾತನಾಡುತ್ತಾ ಬಂದರು. ಇದ್ದಿಲನ್ನು ಕೊಟ್ಟು, ಮಗುವಿಗೆ ಸಾಮ್ರಾಣಿ ಹಾಕುವ ಉದ್ದೇಶಕ್ಕೆ ಅಲ್ಲವಾ ಎಂದು ಕೇಳಿದರು. ಹೌದು ಎಂದಾಗ, ಹಣ ತೆಗೆದುಕೊಳ್ಳಲಿಲ್ಲ. ಮಗುವಿಗೆ ಹಣ ಪಡೆಯುವುದಿಲ್ಲ ಎಂಬ ಅವರ ಮಾತನ್ನು ಮರೆಯಲಾರೆ. ಹಿಂಸಾವಿನೋದ ಇರುವ ಜಗತ್ತಿನಲ್ಲಿ ಇಂತಹ ಮಾನವಮೂರ್ತಿಗಳೂ ಇದ್ದಾರೆ.

ಪ್ರತಿಕ್ರಿಯಿಸಿ: **feedback@sudha.co.in**

## ಮೌಲ್ಯಗಳ ಅಧಃಪತನ



ಗಂಡ, ಹೆಂಡತಿ, ಮಕ್ಕಳು, ತಂದೆ, ತಾಯಿ... ಹೀಗೆ ಪ್ರೀತಿ ಪಾತ್ರವಾದ ಸಂಬಂಧಗಳ ನಡುವೆಯೇ ದ್ವೇಷ, ವೈಷಮ್ಯ, ಕೊಲೆಗಳೂ ಇಂದಿನ ಕಾಲಘಟ್ಟದಲ್ಲಿ ರಾಜಾರೋಷವಾಗಿ ನಡೆಯುತ್ತಿವೆ. ಮಾನವೀಯ ಮೌಲ್ಯಗಳು ಅಧಃಪತನದತ್ತ ಜಾರುತ್ತಿರುವುದೇ ಇಂತಹ ಪರಿಸ್ಥಿತಿಗೆ ಕಾರಣ.

ಬದುಕು ಆಧುನಿಕತೆಯತ್ತ ಸಾಗಿದಂತೆಲ್ಲ ಜನರ ನಡುವಿನಲ್ಲಿ ಮಾನವೀಯ ಮೌಲ್ಯಗಳು ಅಧಃಪತನದತ್ತ ಸಾಗುತ್ತಿವೆ. ಇದು ವಿಷಾದನೀಯ. ಹಿಂದೆಲ್ಲಾ ಕೂಡುಕುಟುಂಬಗಳಲ್ಲಿ 'ಹಿತ್ತಲ ಹಿಂಸೆ'ಗೆ ಜಾಗವಿರುತ್ತಿರಲಿಲ್ಲ. ಒಟ್ಟಿಗೆ ಇರುತ್ತಿದ್ದ ಹಿರಿಯರು ಇಂತಹ ಪ್ರಕರಣಗಳು ಸಂಭವಿಸದಂತೆ ರಕ್ಷಾ ಕವಚದಂತೆ ಕಾವಲಿದ್ದರು. ತಿಳಿವಳಿಕೆ ಮೂಡಿಸುತ್ತಿದ್ದರು. ಸಂಬಂಧಗಳ ಮೌಲ್ಯಗಳನ್ನು ಬಾಲ್ಯದಿಂದಲೇ ನಮ್ಮೊಳಗೆ ಬಿತ್ತುತ್ತಿದ್ದರು. ಅವು ಗಟ್ಟಿಯಾಗಿ ಬೇರೂರಿ ಬದುಕಿನುದ್ದಕ್ಕೂ ಅದೇ ಮೌಲ್ಯಗಳು ನಮಗೆ ದಾರಿದೀಪವಾಗುತ್ತಿದ್ದವು.

ಈಗಿನ ಜನಸಮೂಹದಲ್ಲಿ ಸ್ವೇಚ್ಛಾಚಾರ ಹೆಚ್ಚುತ್ತಿದೆ. ಇದರ ಸೋಗಿನಲ್ಲಿ, ಸ್ವತಂತ್ರ ಜೀವನದ ಕನಸಿನಲ್ಲಿ ಸಂಪ್ರದಾಯ, ಮೌಲ್ಯಗಳು ತಮ್ಮ ಸ್ಥಾನ ಕಳೆದುಕೊಂಡು ಜನರ ನಡುವಿನ ಪರಸ್ಪರ ನಂಬಿಕೆಯ ಕಟ್ಟೆ ಒಡೆಯುತ್ತಿದೆ. ಈಗೀಗ ಮನುಷ್ಯ ಹಣ, ಆಸ್ತಿಗೆ ಬೆಲೆ ಕೊಟ್ಟಷ್ಟು ಸಂಬಂಧಗಳಿಗೆ ಬೆಲೆ ಕೊಡುತ್ತಿಲ್ಲ. ಇದಕ್ಕೆ ತಾಜಾ ಉದಾಹರಣೆ ಈಚೆಗೆ ನಡೆದ ಪ್ರತಿಷ್ಠಿತರ ಭೀಕರ ದುರಂತ.

ಮಾನವೀಯ ಮೌಲ್ಯಗಳನ್ನು ಕಸಿದುಕೊಂಡಿರುವ ಹಣ, ಸಂಪತ್ತಿನ ಮೂಲಕವೇ ಜನರು ನೆಮ್ಮದಿಯ ಹುಡುಕಾಟದಲ್ಲಿದ್ದಾರೆ. ಅದರ ಪರಿಣಾಮವಾಗಿ ದೊಡ್ಡವರು ಎನಿಸಿಕೊಂಡವರು ಚಾಕುವಿನ ಇರಿತಕ್ಕೊಳಗಾಗಿ, ರಕ್ತದ ಮಡುವಿನಲ್ಲಿ ಅಂತ್ಯಕಾಣುತ್ತಿದ್ದಾರೆ.

**–ಆಶಾ, ಸಬ್ ಇನ್‌ಸ್ಪೆಕ್ಟರ್,**
**ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆ, ಬೆಂಗಳೂರು**